ಇ) ಹೌದು.

ಈ) ಈ ಆದೇಶಗಳು ದಿನಾಂಕ:1.4.2007 ರಿಂದ ಜಾರಿಯಲ್ಲಿದೆ.

832 (1200) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಭಾಲ್ಕಿ ತಾಲ್ಲೂಕಿನಲ್ಲಿ ದಿನಾಂಕ:22.06.2007 ರಂದು ಭಾರಿ ಮಳೆಯಿಂದ ಮನೆಗಳು ನೀರಿನಲ್ಲಿ ಮುಳುಗಡೆಯಾಗಿ ಬಡ ಜನರ ಜೀವನ ಅಸ್ತವ್ಯಸ್ತಗೊಂಡು ಬಹಳಷ್ಟು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಬಡ ಜನರ ಮನೆಗಳು ಹಾಗೂ ಇವರ ಜೀವನ ಸುಧಾರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು;

ಈ) ಹಾಗಿದ್ದಲ್ಲಿ ಇವರು ಸುಧಾರಣೆಗೆ ಯಾವಾಗ ಕ್ರಮ ಕೈಗೊಳ್ಳುವಿರಿ ಎಂಬುದನ್ನು ಸ್ಪಷ್ಟ ನಿರ್ದೇಶನದೊಡನೆ ತಿಳಿಸುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ದಿನಾಂಕ:22.6.2007 ರಂದು ಭಾಲ್ಕಿ ಪಟ್ಟಣದಲ್ಲಿ ಬಿದ್ದ ಭಾರಿ ಮಳೆಯಿಂದ ಬೀದರ್ ಬೇಸ್ ಬಡಾವಣೆ ಹಾಗೂ ದೇವಿ ಕಾಲೋನಿ ಹತ್ತಿರ ನಾಲಾ ನೀರು(ಚರಂಡಿ) ಕೇವಲ 22 ಸಾರ್ವಜನಿಕರ ಮನೆಗಳಲ್ಲಿ ನುಗ್ಗಿ ಮನೆಯಲ್ಲಿರುವ ನಿತ್ಯೋಪಯೋಗಿ ವಸ್ತುಗಳಿಗೆ ಮಾತ್ರ ಹಾನಿಯಾಗಿರುತ್ತದೆ. ಈ ಪೈಕಿ 3 ಮನೆಗಳು ಮಾತ್ರ ಭಾಗಶಃ ಬಿದ್ದಿರುತ್ತವೆ.

ಆ) ಮನೆಗಳ ಹಾನಿಗಳ ಬಗ್ಗೆ ತಹಶೀಲ್ದಾರ್ ಸಮೀಕ್ಷೆ ನಡೆಸುತ್ತಿದ್ದು, ವರದಿ ಬಂದ ತಕ್ಷಣ ಪರಿಹಾರ ನೀಡಲಾಗುವುದು. ತುರ್ತು ಪರಿಹಾರ ನೀಡಲು ಮತ್ತು ಪರಿಹಾರ ಕಾರ್ಯ ಕೈಗೊಳ್ಳಲು ಬೀದರ್ ಜಿಲ್ಲೆಗೆ ಸರ್ಕಾರದಿಂದ ರೂ.50.00 ಲಕ್ಷ ಬಿಡುಗಡೆ ಮಾಡಲಾಗಿದೆ.

ಇ) ಕೇಂದ್ರ ಸರ್ಕಾರ ನಿಗದಿಪಡಿಸಿದ ಪ್ರಕೃತಿ ವಿಕೋಪ ಮಾರ್ಗಸೂಚಿಗಳಂತೆ ಮನೆಹಾನಿಗೆ ಪರಿಹಾರ ನೀಡಲಾಗುವುದು.

ಈ) ಪರಿಹಾರ ಧನ ವಿತರಿಸಲಾಗುವುದು.

834 (1189) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು ಯಾವುವು;

ಆ) ಈ ಕಾರ್ಖಾನೆಗಳಲ್ಲಿನ ಉತ್ಪನ್ನಗಳ ವಿವರ ನೀಡುವುದು;

ಇ) ಈ ಕಾರ್ಖಾನೆಗಳ ಕಳೆದ ಮೂರು ವರ್ಷಗಳಲ್ಲಿನ ಲಾಭ–ನಷ್ಟಗಳ ವಿವರ ನೀಡುವುದು;

ಈ) ಈ ಕಾರ್ಖಾನೆಗಳಲ್ಲಿನ ಉತ್ಪನ್ನಗಳನ್ನೇ ರಾಜ್ಯ ಸರ್ಕಾರದ ಇತರೆ ಇಲಾಖೆಗಳ ಖರೀದಿಸುವಂತೆ ಸರ್ಕಾರದಿಂದ ಸುತ್ತೋಲೆ ಹೊರಡಿಸಲಾಗಿದೆಯೇ (ವಿವರ ನೀಡುವುದು)

ಉ) ಹಾಗಿಲ್ಲದಿದ್ದಲ್ಲ, ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳ ಉತ್ಪನ್ನಗಳನ್ನು ಸರ್ಕಾರ ಇಲಾಖೆಗಳು ಖರೀದಿಸುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ, ಆ ಮತ್ತು ಇ) ಅನುಬಂಧದಲ್ಲಿ ನೀಡಲಾಗಿದೆ.

ಈ) ಇಲ್ಲ.

ಉ) 1999ರ ಕೆಟಿಪಿಪಿ ಕಾಯಿದೆ ಜಾರಿಗೆ ಬಂದಿರುವುದರಿಂದ, ಈ ರೀತಿ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ.

ಅನುಬಂಧ

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ; 1189,
ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ, ದಿ:23–7–2007.

ಕಂಪನಿಯ ಹೆಸರು	ಉತ್ಪನ್ನ	ಕಳೆದ 3ವರ್ಷಗಳ ಲಾಭ/ನಷ್ಟಗಳ ವಿವರ (ರೂ.ಲಕ್ಷಗಳಲ್ಲಿ)		
		2003–04	2004–05	2005–06
ಮೈಸೂರು ಪೆಯಿಂಟ್ಸ್ & ವಾರ್ನಿಷ್ ನಿಯಮಿತ	ಬಣ್ಣಗಳು ಮತ್ತು ಸಂಬಂಧಿತ ಉತ್ಪನ್ನ	276.00	335.00	473.89
ಕವಿಕಾ ನಿಯಮಿತ	ಟ್ರಾನ್ಸ್ ಫಾರ್ಮರ್‌ಗಳು	–1080.64	–651.46	129.55
ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟೀಸ್ ನಿಯಮಿತ	ಎಲೆಕ್ಟ್ರಿಕಲ್ ಉಪಕರಣಗಳು	–12.71	75.26	76.72
ಮೈಸೂರು ಕಾಗದ ಕಾರ್ಖಾನೆ ನಿಯಮಿತ	ಕಾಗದ ಉತ್ಪನ್ನ	–978.15	–817.37	+258.66
ಕರ್ನಾಟಕ ಸಾಬೂನು & ಮಾರ್ಜಕ ನಿಯಮಿತ	ಸಾಬೂನು & ಡಿಟರ್ಜೆಂಟ್	51.63	31.34	23.67
ಎನ್ ಜಿಇಎಫ್ (ಹುಬ್ಬಳ್ಳಿ)	ಎ.ಸಿ.ಮೋಟಾರ್‌ಗಳು	7.81	20.38	54.80

836 (1192) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಾದ್ಯಂತ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಉಪ ನೊಂದಣಾಧಿಕಾರಿಗಳ ಕಛೇರಿಗಳಿವೆ?